ಎಂ ವಿ ಸಿ ನಂ. 163/2019
ಆರ್ ಡಬ್ಲ್ಯೂ: 2
ದಿನಾಂಕ 27-05-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: 4ನೇ ಎದುರುದಾರರ ಪರ: ಶ್ರೀ ಸಿ ಜೆ ಎಂ ವಕೀಲರಿಂದ:</u>

ನಾನು ಕೆಎ-03 ಎಸಿ-6268 ಕಾರಿನ ಮಾಲೀಕನಾಗಿರುತ್ತೇನೆ. ಸದರಿ ಕಾರನ್ನು ನನ್ನ ತಂದೆಯಾದ / 2ನೇ ಎದುರುದಾರರಾದ ಜಗದೀಶ್ ರವರು ಚಾಲನೆ ಮಾಡುತ್ತಿದ್ದರು. ನಾನು ಮತ್ತು ನನ್ನ ತಂದೆ ಎಲ್ಲಾರೂ ಒಟ್ಟು ಕುಟುಂಬದಲ್ಲಿ ವಾಸ ಇದ್ದೇವೆ ಎಂದರೆ ಸಾಕ್ಷಿ ಬೇರೆ ಬೇರೆ ವಾಸ ಇದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ನಮ್ಮ ಒಟ್ಟು ಕುಟುಂಬದಲ್ಲಿ ವಿಭಾಗವಾದ ಬಗ್ಗೆ ಪಾಲು ಪಟ್ಟಿ ಅಥವಾ ಇನ್ನಿತರೇ ದಾಖಲೆ ಏನಾದರೂ ಇದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಂದೆ ಒಟ್ಟಿಗೆ ಒಂದೇ ಕುಟುಂಬದಲ್ಲಿ ವಾಸ ಇದ್ದರೂ ಸಹ ಬೇರೆ ಬೇರೆ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲ್ಕಂಡ ಕಾರು ನನ್ನ ಸ್ವಂತದ್ದಾಗಿದ್ದು, ವೈಟ್ ಬೋರ್ಡ ಹೊಂದಿರುತ್ತದೆ ಎಂದರೆ ಸಾಕ್ಷಿ ಅದು ಎಲ್ಲೋ ಬೋರ್ಡ ಎಂದು ನುಡಿಯುತ್ತಾರೆ. ನನ್ನ ಕಾರು ಟ್ಯಾಕ್ಸಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಪರ್ಮಿಟ್ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಅಪಘಾತದ ಸಮಯದಲ್ಲಿ 2ನೇ ಎದುರುದಾರರಿಗೆ ಟ್ಯಾಕ್ಸಿಯನ್ನು ಚಾಲನೆ ಮಾಡಲು ಚಾಲನಾ ಪರವಾನಿಗಿ / ಬ್ಯಾಡ್ಜ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. 2ನೇ ಎದುರುದಾರರಿಗೆ ಟ್ಯಾಕ್ಸಿಯನ್ನು ಚಾಲನೆ ಮಾಡಲು ಚಾಲನಾ ಪರವಾನಿಗಿ / ಬ್ಯಾಡ್ಜ ಇರುವ ಬಗ್ಗೆ ಯಾವುದೇ ದಾಖಲೆಯನ್ನು ಸಹ

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2ನೇ ಎದುರುದಾರರಿಗೆ ಟ್ಯಾಕ್ಸಿ ಚಾಲನೆ ಮಾಡಲು ಪರವಾನಿಗಿ ಇದ್ದ ಬಗ್ಗೆ ಯಾವ ದಾಖಲೆ ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿ ಚಾಲನಾ ಪರವಾನಿಗಿ ಹಾಜರುಪಡಿಸಿದ್ದು ಅದರಲ್ಲಿ ಬ್ಯಾಡ್ಜ ನಂಬರು ಇದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಆರ್-6ರ ಚಾಲನಾ ಪರವಾನಿಗಿಯಲ್ಲಿ ಬ್ಯಾಡ್ಜ ನಂಬರು ನಮೂದು ಇಲ್ಲ ಎಂದರೆ ಸಾಕ್ಷಿ ದಾಖಲೆ ಪರಿಶೀಲಿಸಿ ಹೌದು ಎಂದು ನುಡಿಯುತ್ತಾರೆ.

2. ಅಪಘಾತವು ಕೆಎ-09 ಎಂ-6548 ಜೆನ್ ಕಾರಿನ ಚಾಲಕನಾದ ಆಶಿಶ್ ಯಾನೇ ವಿನಾಯಕರವರ ತಪ್ಪಿನಿಂದ ಆಗಿದೆ ಎಂದು ಪೋಲೀಸರು ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ಅಪಘಾತದಲ್ಲಿ 2ನೇ ಎದುರುದಾರರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿ. ಸದರಿ ಅಪಘಾತದಲ್ಲಿ ಕೆಎ-09 ಎಂ-6548 ಜೆನ್ ಕಾರಿನ ಚಾಲಕ ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಪೋಲೀಸರು ತನಿಖೆ ನಡೆಸಿ ಸದರಿ ಆಶಿಶ್ ಯಾನೇ ವಿನಾಯಕರವರ ವಿರುದ್ಧ ಅಬೇಟೆಡ್ ಚಾರ್ಜ್ ಶೀಟ್ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಆರ್-5ರ ದಾಖಲೆ ನನ್ನ ಕಾರಿನ ಆರ್ ಸಿ ಎಕ್ಸಟ್ರಾಕ್ಟ ಆಗಿರುತ್ತದೆ ಎಂದರೆ ಸರಿ. ದಿನಾಂಕ 18/10/2017ರವರೆಗೆ ಮಾತ್ರ ಸದರಿ ಕಾರಿನ ಎಫ್ ಸಿ ಚಲಾವಣೆಯಲ್ಲಿತ್ತು ಎಂದರೆ ಸರಿ. ಅಪಘಾತವು ದಿನಾಂಕ 29/10/2017ರಂದು ಆಗಿರುತ್ತದೆ ಎಂದರೆ ಸರಿ. ಅಪಘಾತವಾದ ದಿನ ನನ್ನ ಕಾರಿನ ಎಫ್ ಸಿ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಕಾರಿನ ಎಫ್ ಸಿ ರಿನೀವಲ್ ಆಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ವಕೀಲರಿಗೆ ಕೊಟ್ಟಿದ್ದೆ ಎಂದು

ನುಡಿಯುತ್ತಾರೆ. ನನ್ನ ಕಾರಿನ ಎಫ್ ಸಿ ಚಾಲ್ತಿಯಲ್ಲಿ ಇರದೇ ಇರುವುದರಿಂದ ಮತ್ತು ನನ್ನ ತಂದೆಗೆ ಟ್ಯಾಕ್ಸಿ ಚಾಲನೆ ಮಾಡಲು ಸೂಕ್ತವಾದ ಚಾಲನಾ ಪರವಾನಿಗಿ / ಬ್ಯಾಡ್ಜ್ ಇಲ್ಲದೆ ಇರುವುದರಿಂದ ನಮ್ಮ ಪರವಾಗಿ 4 ನೇ ಎದುರುದಾರರು ವಿಮಾ ಪರಿಹಾರ ನೀಡಲು ಯಾವುದೇ ಬಾದ್ಯಸ್ಥಿಕೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಎದುರುದಾರರ ಪರಃ ಶ್ರೀ ಎ ಎಸ್ ಎಸ್ ವಕೀಲರಿಂದಃ</u>

2 ನೇ ಎದುರುದಾರ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಕೆಎ-09 ಎಂ-6548 ಜೆನ್ ಕಾರಿನ ಚಾಲಕನಾದ ಆಶಿಶ್ / ವಿನಾಯಕರವರ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಜತೆ ಷರೀಕ್ಕಾಗಿ ಸದರಿ ಆಶಿಶ್ ರವರ ವಿರುದ್ದ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಕೆಯಾಗುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆಶಿಶ್ ರವರ ತಪ್ಪಿಲ್ಲ ಆಗಾಗಿ ಅರ್ಜಿದಾರರಿಗೆ 2 ರಿಂದ 4 ನೇ ಎದುರುದಾರರಾದ ನಾವುಗಳು ಪರಿಹಾರ ನೀಡಲು ಬಾದ್ಯರು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.